

# ವಿಶ್ವಮಟ್ಟಕ್ಕೇರಿದ 12ರ ಫುಟ್ಬಾಲ್ ಹುಡುಗ!

ಈ ಪುಟಾಣಿಯ ಹೆಸರು ಸೂರ್ಯ ವಾರಿಕುಟ್ಟಿ. ವಯಸ್ಸು 12 ವರ್ಷ. ಈಗಾಗಲೇ ಫುಟ್ಬಾಲ್‌ನಲ್ಲಿ ವಿಶ್ವಮಟ್ಟಕ್ಕೇರಿದ್ದಾನೆ. ರಷ್ಯಾದಲ್ಲಿ ನಡೆದ 'ಅಂಡರ್ 13' ಎಫ್4ಎಫ್ ಫುಟ್ಬಾಲ್ ಕ್ರೀಡೆಯಲ್ಲಿ ಭಾರತವನ್ನು ಪ್ರತಿನಿಧಿಸಿದ ಏಕೈಕ ಬಾಲಕ ಸೂರ್ಯ.

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಡೆಲ್ಲಿ ಪಬ್ಲಿಕ್ ಶಾಲೆಯಲ್ಲಿ ಏಳನೆ ತರಗತಿಯಲ್ಲಿ ಓದುತ್ತಿರುವ ಸೂರ್ಯ ವಾರಿಕುಟ್ಟಿ ಐದು ವರ್ಷದ ಪುಟಾಣಿಯಾಗಿದ್ದಾಗಲೇ ಫುಟ್ಬಾಲ್ ಆಟದತ್ತ ಆಕರ್ಷಿತನಾದ. ಶಾಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ತೊಡಗಿಸಿಕೊಂಡು ರಾಷ್ಟ್ರಮಟ್ಟದ ಫುಟ್ಬಾಲ್ ಆಯ್ಕೆ ಸಮಿತಿ ನಡೆಸಿದ ಕ್ರೀಡಾಪಟುಗಳ ಆಯ್ಕೆ ರೌಂಡ್‌ನಲ್ಲಿ ಮೊದಲಿಗನಾದ. ಎಐಎಫ್‌ಎಫ್ ವತಿಯಿಂದ ನಡೆದ ಡಿಫೆಂಡರ್ ಆಯ್ಕೆ ಪ್ರಕ್ರಿಯೆಯಲ್ಲಿ ಅತ್ಯುತ್ತಮ ನಿರ್ವಹಣೆ ತೋರುವ ಮೂಲಕ ಮಾಸ್ಕೋದಲ್ಲಿ ಆಟವಾಡಲು ಆಯ್ಕೆಯಾದ. ಫಿಟ್‌ನೆಸ್‌ನಲ್ಲೂ ಬಾಲಕ ಮೆಚ್ಚುಗೆ ಗಳಿಸಿದ್ದ. ಈತ ರೂಟ್ಸ್ ಫುಟ್‌ಬಾಲ್ ಸ್ಕೂಲ್‌ನಲ್ಲಿ ತರಬೇತಿ ಪಡೆದಿದ್ದು, ಆಲ್‌ಇಂಡಿಯಾ ಫುಟ್ಬಾಲ್ ಫೆಡರೇಷನ್ 13 ವರ್ಷದೊಳಗಿನ ಬಾಲಕರ ವಿಭಾಗದಲ್ಲಿಯೂ ಮುಂಚೂಣಿಯಲ್ಲಿದ್ದ.

'ವಾರದಲ್ಲಿ ಐದು ದಿನ ಕಟ್ಟುನಿಟ್ಟಿನ ಕೋಚಿಂಗ್‌ನಲ್ಲಿ ತೊಡಗಿಸಿ ಕೊಳ್ಳುತ್ತೇನೆ. ನನ್ನ ಫುಟ್ಬಾಲ್ ಕೋಚ್‌ಗಳಾದ ಬಾಪ್ಪ ಮತ್ತು ಅಮಿತ್ ನೀಡುವ ತರಬೇತಿಯನ್ನು ಶ್ರದ್ಧೆಯಿಂದ ಮಾಡುತ್ತೇನೆ, ಫಿಟ್‌ನೆಸ್ ಅನ್ನೂ ಕಾಪಾಡಿಕೊಂಡು ಗುರಿ ಮುಟ್ಟುವಲ್ಲಿ ಸತತ ಪ್ರಯತ್ನ ನಡೆಸಿದೆ. ಇದರ ಫಲವಾಗಿ ನನಗೆ ಅವಕಾಶಗಳು ದೊರೆಯುತ್ತಾ ಬಂದವು. ಈಗ ಸಿಕ್ಕಿದ ಅವಕಾಶ ಅಂತೂ ನನ್ನ ಜೀವನದ ಮಹತ್ವದ ಘಟ್ಟ ಎಂದೇ ಭಾವಿಸುತ್ತೇನೆ. ಕೋಚ್‌ಗಳ ಹಾಗೆ ತಂದೆ ತಾಯಿಯರಾದ ವೇಣು ಹಾಗೂ ಗೀತಾ ನನ್ನ ಸಾಧನೆಗೆ ನಿರಂತರ ಪ್ರೋತ್ಸಾಹ ನೀಡುತ್ತಿದ್ದಾರೆ' ಎನ್ನುತ್ತಾನೆ ಸೂರ್ಯ.

ಫುಟ್‌ಬಾಲ್ ಅಲ್ಲದೆ ಬ್ಯಾಡ್ಮಿಂಟನ್, ವಾಲಿಬಾಲ್‌ಗಳಲ್ಲೂ ಈ ಹುಡುಗನಿಗೆ ಎಲ್ಲಿಲ್ಲದ ಆಸಕ್ತಿ. ಶಾಲೆಯ ಪಠ್ಯ ಅಭ್ಯಾಸದಲ್ಲಿ ಉತ್ತಮ ಸಾಧನೆಯನ್ನೇ ತೋರುತ್ತಿರುವ ಸೂರ್ಯನಿಗೆ ಕ್ರೀಡೆಯಲ್ಲಿ ಬಹಳ ಎತ್ತರಕ್ಕೇರುವ ಆಸೆ ಇದೆ.

'ರಷ್ಯಾದಲ್ಲಿ ನಡೆದ ಗ್ಲೋಬಲ್ ಫುಟ್‌ಬಾಲ್ ಫಾರ್ ಫ್ರೆಂಡ್ ಶಿಪ್ (ಎಫ್4ಎಫ್) ಆಟದಲ್ಲಿ ಭಾರತವನ್ನು ಪ್ರತಿನಿಧಿಸುವುದು ನಮಗೂ ಹೆಮ್ಮೆ ತಂದಿದೆ' ಎನ್ನುತ್ತಾರೆ ಸೂರ್ಯನ ತಂದೆ ವೇಣು.

ಎಫ್4ಎಫ್ ಎಂದರೆ ಮಕ್ಕಳ ಅಂತರರಾಷ್ಟ್ರೀಯ ಸಾಮಾಜಿಕ ಕಾರ್ಯಕ್ರಮವಾಗಿದ್ದು, ಯುವ ಫುಟ್‌ಬಾಲ್ ಆಟಗಾರರನ್ನು ಗುರುತಿಸಿ ಪ್ರೋತ್ಸಾಹಿಸುವುದು, ಸಹಿಷ್ಣುತೆ, ವಿಶಾಲ ಮನೋಭಾವನೆ, ಆರೋಗ್ಯಕರ ಜೀವನಶೈಲಿ ರೂಪಿಸಲು ಪ್ರೋತ್ಸಾಹಿಸುವುದು, ವಿವಿಧ ಸಂಸ್ಕೃತಿ ಹಾಗೂ ರಾಷ್ಟ್ರೀಯತೆಯನ್ನು ಮಕ್ಕಳಲ್ಲಿ ಬಿಂಬಿಸುವುದು ಆಗಿದೆ. ಈ ವರ್ಷದ ಫುಟ್‌ಬಾಲ್ ಆಟ ಆರನೆ ಆವೃತ್ತಿಯಾಗಿದ್ದು, ಎಫ್4ಎಫ್ ನಲ್ಲಿ 211 ದೇಶಗಳ ಮಕ್ಕಳು ಭಾಗವಹಿಸಿದ್ದರು.

ಜೂನ್ ಒಂಬತ್ತರಿಂದ ರಷ್ಯಾದ ಮಾಸ್ಕೋದಲ್ಲಿ ಈ ಫುಟ್ಬಾಲ್ ಮ್ಯಾಚ್ ನಡೆದಿದ್ದು, ಬೇರೆ ಬೇರೆ ದೇಶಗಳಿಂದ ಬಂದ ಮಕ್ಕಳ ಪೈಕಿ ಒಟ್ಟು ಆರು ಸದಸ್ಯರ ಟೀಮ್‌ನಲ್ಲಿ ಸೂರ್ಯ ಒಬ್ಬನಾಗಿದ್ದ. ಇಡೀ ವಿಶ್ವದಿಂದ ಒಟ್ಟು 32 ತಂಡಗಳು ಈ ಮ್ಯಾಚ್‌ನಲ್ಲಿ ಭಾಗವಹಿಸಿವೆ.

■ ಯು.ವೇಣೂರು